ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ 14-02-2020

ಪಾಟಿ ಸವಾಲುಃ ಶ್ರೀ ಪಿ.ಕೆ.ಜಿ ವಕೀಲರಿಂದ

ಪ್ರಾಸಾ 3 ರವರು ನಮ್ಮ ಊರಿನವರು. ನಾನು ಪ್ರಾಸಾ 3 ರವರ ಅತ್ತೆ ಮಗ ಎಂದರೆ ಸರಿ . ಪ್ರಾಸಾ 3 ರವರು ಪ್ರಾಸಾ 1 ರವರ ಬಾವ ಆಗಬೇಕೆಂದರೆ ಸರಿ. ನಮ್ಮ ಕುಟುಂಬಕ್ಕೂ ಪ್ರತಿವಾದಿಗಳ ಕುಟುಂಬಕ್ಕೂ ಮೊದಲಿನಿಂದಲೂ ವೈರತ್ವ ಇದೆ ಎಂದರೆ ಸರಿಯಲ್ಲಾ . ನಾನು ಈ ದಾವೆಯಲ್ಲಿ ಒತ್ತುವರಿ ಸಂಬಂಧ ಸಾಕ್ಷಿ ಹೇಳಲು ಬಂದಿರುತ್ತೇನೆ.

ನನಗೆ ಬೆಂಕನಹಳ್ಳಿ - ಕೊತ್ತನಹಳ್ಳಿಯಲ್ಲಿ ಸರ್ವೆ ನಂ. 134 ರಲ್ಲಿ 2 ಎಕರೆ ಆಸ್ತಿ ಇದೆ. ನನ್ನ ತಂದೆ ಬಸಪ್ಪ ರವರಿಗೆ 6 ಎಕರೆ ಆಸ್ತಿಯು ಸರ್ವೆ ನಂ. 134 ಮತ್ತು 1/135 ರಲ್ಲಿ 6 ಎಕರೆ ಆಸ್ತಿ ಇರುತ್ತದೆ ಎಂದು ನುಡಿದಿರುತ್ತಾರೆ. ವಾದಿ 1 ರಿಂದ 17 ರವರು ಒಂದೇ ಕುಟುಂಬದವರಾಗಿರುತ್ತಾರೆ. ಅವರೆಲ್ಲಾ ಒಟ್ಟಿಗೆ ವಾಸವಾಗಿದ್ದು , ಇನ್ನು ಅಸ್ತಿಗಳು ಅವರ ಮದ್ಯ ಪಾಲಾಗಿರುವುದಿಲ್ಲ. ಅವರಿಗೆ ಎಷ್ಟು ಜಾಗ ಇದೆ ಎಂದು ನನಗೆ ಗೊತ್ತಿಲ್ಲಾ. ಮತ್ತು ಸರ್ವೆ ನಂ. ಗಳಲ್ಲಿ ಅವರಿಗೆ ಜಾಗ ಇದೆ ಎಂದು ನನಗೆ ಗೊತ್ತಿಲ್ಲಾ.

ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಸರ್ವೆ ನಂ. ಗಳನ್ನು ಪ್ರಾಸಾ 1 ರವರ ನನಗೆ ಹೇಳಿರುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ಸರ್ವೆ ನಂ. ಗಳಲ್ಲಿ ವಾದಿಗೆ ಎಷ್ಟು ಜಾಗ ಇದೆ ಎಂದು ನನಗೆ ಗೊತ್ತಿಲ್ಲಾ . ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವ 3 ಸರ್ವೆ ನಂ. ಗಳು 1 ನೇ ವಾದಿ ಹೆಸರಿನಲ್ಲಿ ಇದೆ. ಸಾಕ್ಷಿ ಮುಂದುವರೆದು ಸದರಿ 3 ಸರ್ವೆ ನಂ. ವಾದಿಗಳ ಕುಟುಂಬದ ಹೆಸರಿನಲ್ಲಿ ಇರುವುದಾಗಿ ನುಡಿದಿರುತ್ತಾರೆ .

1ನೇ ವಾದಿ ಜೀವಂತವಾಗಿದ್ದಾರೆ. 1ನೇ ವಾದಿ ಮತ್ತು ಮಲ್ಲಪ್ಪ ಎಂಬ ಇಬ್ಬರು ಸಹೋದರರಾಗಿರುತ್ತಾರೆ. 1ನೇ ವಾದಿ ಜೊತೆ 16 ಮಂದಿ ಈ ದಾವೆಯನ್ನು ಹಾಕಿರುತ್ತಾರೆ. ಅದರ ಪೈಕಿ 2, 3 ಮತ್ತು 7ನೇ ವಾದಿಯ ತಂದೆ ಸ್ವಂತ ಅಣ್ಣ ತಮ್ಮಂದಿರು ಎಂದರೆ ಸರಿ. 2 ರಿಂದ 4ನೇ ವಾದಿಗಳು ಬೇರೆ ಬೇರೆ ವಾಸವಾಗಿದ್ದಾರೆ. ಸೋಮವಾರಪೇಟೆ ಜಾಗದಲ್ಲಿ 2 ರಿಂದ 4 ನೇ ವಾದಿಗಳು ಒಟ್ಟಿಗೆ ವ್ಯವಸಾಯ ಮಾಡುತ್ತಿದ್ದು , ಅಬ್ಬೂರುಕಟ್ಟೆಯಲ್ಲಿರುವ ಜಾಗವನ್ನು ಹಂಚಿಕೊಂಡಿರುತ್ತಾರೆ.

ಸರ್ವೆ ನಂ. 57/4 ರಲ್ಲಿ ಒಟ್ಟು 3 ಎಕರೆ 7 ಸೆಂಟ್ ಹೊಂದಿದೆ. ಸರ್ವೆ ನಂ. 79/22 ಮತ್ತು 79/20 ರಲ್ಲಿ ಎಷ್ಟಿದೆ ಜಾಗ ಇದೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲಾ. ಸರ್ವೆ ನಂ. 57/4 ರಲ್ಲಿ 70-80 ಸೆಂಟ್ ಒತ್ತುವರಿ ಆಗಿರುವುದನ್ನು ನಾನು ಅಂದಾಜಿನ ಮೇಲೆ ಹೇಳುತ್ತಿದ್ದೇನೆ. ಸದರಿ ಒತ್ತುವರಿಯನ್ನು 7ನೇ ಪ್ರತಿವಾದಿ ಮಾಡಿರುತ್ತಾರೆ. ದಾವಾ ಸ್ವತ್ತಿನ 1 ನೇ ಐಟಂ ನಲ್ಲಿರುವ ಒಟ್ಟು ವಿಸ್ತೀರ್ಣದ ಪೈಕಿ ಒತ್ತುವರಿ ಮಾಡಿದ ಜಾಗ ಯಾ ದಿಕ್ಕಿಗೆ ಇದೆ ಎಂದು ನನಗೆ ಗೊತ್ತಿಲ್ಲಾ .

ಅದೇ ರೀತಿ ದಾವಾ ಸ್ವತ್ತಿನ 2 ಮತ್ತು 3ನೇ ಐಟಂ ನಲ್ಲಿ ಒತ್ತುವರಿ ಮಾಡಿದ ಜಾಗ ಪೂರ್ವ ಮತ್ತು ಉತ್ತರ ದಿಕ್ಕಿನಲ್ಲಿ ಆಗಿರುತ್ತದೆ. ಸರ್ವೆ ನಂ. 79/22 ರಲ್ಲಿ 30 ಸೆಂಟ್ ಒತ್ತುವರಿ ಆಗಿದ್ದು ಮತ್ತು 79/20 ರಲ್ಲಿ ಎಷ್ಟು ಒತ್ತುವರಿ ಆಗಿದೆ ಆದರೆ ಎಷ್ಟು ಸೆಂಟ್ ಆಗಿದೆ ಎಂದು ನನಗೆ ಗೊತ್ತಿಲ್ಲಾ . ನಾನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ 20 ಸೆಂಟ್ ಒತ್ತುವರಿ ಮತ್ತು ಈವಾಗ ಮೇಲೆ ತಿಳಿಸಿದ ಒತ್ತುವರಿ ನಾನು ಅಂದಾಜಿನ ಮೇಲ ಹೇಳುತ್ತಿದ್ದೇನೆ. ಆದ್ದರಿಂದ ಪ್ರತಿವಾದಿಗಳು ಎಷ್ಟು ಜಾಗ ಒತ್ತುವರಿ ಮಾಡಿದ್ದಾರೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲಾ ಎಂದರೆ ಸರಿ .

ಆದಕಾರಣ ವಾದಿಯ ಕುಟುಂಬದವರು ಈ ದಾವೆಯ ಒತ್ತುವರಿ ಆಗಿರುವ ಸಂಬಂಧ ಅಂದಾಜಿನ ಮೇಲೆ ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ವಾದಿಗಳ ಮೇಲೆ ಓ.ಎಸ್. ನಂ. 158/94 ರಂತೆ ದಾವಾ ಹಾಕಿದ್ದರ ಬಗ್ಗೆ ನನಗೆ ಗೊತ್ತಿಲ್ಲಾ. ಸದರಿ ದಾವೆಯಲ್ಲಿ ವಾದಿಗಳು ಪ್ರತಿವಾದಿಗೆ ಸೇರಿದ ಜಾಗವನ್ನು ಒತುತವರಿ ಮಾಡಿದ್ದಾರೆ ಎಂದು ತೀರ್ಪು ಆಗಿತ್ತು ಎಂದರೆ ನನಗೆ ಗೊತ್ತಿಲ್ಲಾ .

ಸದರಿ ಒತ್ತುವರಿ ಜಾಗವನ್ನು ಅಮಲ್ ಜಾರಿ ನಂ. 7/2007 ರಂತೆ ಸ್ವಾದೀನಪಡೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲಾ. ಸ್ವಾದೀನ ಪಡೆದ ನಂತರ ಪ್ರತಿವಾದಿ ಬೇಲಿ ಹಾಕಿರುತ್ತಾರೆ ಎಂದರೆ ಸರಿಯಲ್ಲಾ. ಅಮಲ್ ಜಾರಿ ಡಿಕ್ರಿ ಮುಖಾಂತರ ಸರ್ವೆ ಮಾಡಿ ಬೇಲಿ ಹಾಕಿ ಕೊಂಡಿದ್ದನ್ನು ನಾನು ಒತ್ತುವರಿ ಯಾಗಿರುತ್ತದೆ ಎಂದು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲಾ .

ನಾನು ತಿಳಿಸಿದ ರೀತಿ ಸರ್ವೆ ಗುರುತಿನ ಕಲ್ಲನ್ನು ತೆಗೆದು ಹಾಕಿರುವುದನ್ನು ನಾನು ಪ್ರತ್ಯಕ್ಷ ನೋಡಿರುವುದಿಲ್ಲಾ. ಸದರಿ ಕಲ್ಲನ್ನು ಕಿತ್ತು ಹಾಕಿದ್ದ ಬಗ್ಗೆ ವಾದಿಗಳು ಪೊಲೀಸರು ದೂರು ನೀಡಿದ್ದರ ಬಗ್ಗೆ ನನಗೆ ಗೊತ್ತಿಲ್ಲಾ. ಮೇಲೆ ತಿಳಿಸಿದ 3 ಸರ್ವೆ ನಂ. ಗಳ ಪೈಕಿ ಪ್ರತಿವಾದಿಗಳು ಯಾವುದೇ ಜಾಗವನ್ನು ಒತ್ತುವರಿ ಮಾಡಿಲ್ಲಾ ಎಂದರೆ ಸರಿಯಲ್ಲಾ .

ಈ ದಾವೆಯನ್ನು ಹಾಕುವ ಮೊದಲು ವಾದಿಗಳು ಅವರ ಜಾಗವನ್ನು ಸರ್ವೆ ಮಾಡಿ ಗುರುತು ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲಾ. 7 ನೇ ಪ್ರತಿವಾದಿ ಅಮಲ್ ಜಾರಿ ಡಿಕ್ರಿ ಮುಖಾಂತರ ಸರ್ವೆ ಮಾಡಿಸಿ ಹಾಕಿಕೊಂಡಿದ್ದ ಬೇಲಿಯನ್ನು ಕಿತ್ತು ಹಾಕಿರುವುದಾಗಿ ಬಾದಿಗಳ ಮೇಲೆ 33/13 ರಂತೆ ದಾವೆಯನ್ನು ಹಾಕಿರುವ ಬಗ್ಗೆ ನನಗೆ ಗೊತ್ತಿಲ್ಲಾ .

ಸದರಿ ದಾವೆ 7 ನೇ ಪ್ರತಿವಾದಿ ಪರ ಡಿಕ್ರಿ ಆದ ಬಗ್ಗೆ ನನಗೆ ಗೊತ್ತಿಲ್ಲಾ . 7 ನೇ ಪ್ರತಿವಾದಿ ಯಾವುದೇ ಜಾಗ ಒತ್ತುವರಿ ಮಾಡಿಕೊಂಡಿಲ್ಲ , ವಾದಿ ಪ್ರತಿವಾದಿಗೆ ಸೇರಿದ ಜಾಗ ಒತ್ತುವರಿ ಮಾಡಲು ಪ್ರಯತ್ನ ಪಡುತ್ತಿದ್ದಾರೆ ಎಂದರೆ ಸರಿಯಲ್ಲಾ , ಸದರಿ ಒತ್ತುವರಿ ಮಾಡಿಕೊಳ್ಳಲು ಪ್ರಯತ್ನಪಡುತ್ತಿರುವ ಜಾಗವನ್ನೇ ಪಡೆದುಕೊಳ್ಳುವ ಉದ್ದೇಶದಿಂದ ವಾದಿಗಳು ಈ ದಾವೆಯನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ , ನಾನು ವಾದಿಗಳ ಹತ್ತಿರ ಸಂಬಂಧಿಕನಾಗಿರುವ ಕಾರಣ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲಾ . ನಾನು ಈ ದಾವೆಯಲ್ಲಿ ಹಾಕಿರುವ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲಾ ಎಂದರೆ ಸರಿಯಲ್ಲಾ. ನನ್ನ ಪ್ರಮಾಣ ಪತ್ರದಲ್ಲಿ ನಮೂದಿಸಿದ ಉಚ್ಚ ನ್ಯಾಯೂಲಯದ ಆದೇಶದ ಬಗ್ಗೆ ನನಗೆ ಗೊತ್ತಿಲ್ಲಾ. ನಾನು ಹೇಳಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲಾ .

ಪಾಟಿ ಸವಾಲು ಮುಕ್ತಾಯವಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ).**

ಓ ಹೇ ಕೇ ಸರಿ ಇದೆ

ಪ್ರ ದ ನ್ಯಾ ದಂ ಸೋ ಪೇಟೆ